ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ
**ಸಿ.ಸಿ.462/2024**

| | | |
|---|---|---|
| ಸಾಕ್ಷಿದಾರರ ಹೆಸರು | : ಕೃಷ್ಣಮೂರ್ತಿ ನಾಯಕ್ | ಫ್ರಾಸಾ -3 |
| ತಂದೆಯ ಹೆಸರು | : ಶಂಕರ್ ನಾಯಕ್ | ಚಾಸಾ-2 |
| ವಯಸ್ಸು | : 34 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಬಸ್ ಚಾಲಕ, KSRTC | ದಿನಾಂಕಃ20.02.2025. |
| ವಾಸಸ್ಥಳ | : ಉಡುಪಿ | |

:ಮುಖ್ಯ ವಿಚಾರಣೆ ಫ್ರಾಜ್ಞ್ಯಾಸ.ಸ.ಅ. ರವರಿಂದ:

ನಾನು ಉಡುಪಿ KSRTC ಡಿಪೋನಲ್ಲಿ 2 ವರ್ಷಗಳಿಂದ ಬಸ್ ಚಾಲಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಚಾಸಾ-1 ರವರು ಸಹಾ ನಮ್ಮ ಇಲಾಖೆಯ ನಿರ್ವಹಾಕರು. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಚಾರ್ಮುಡಿ ಘಾಟಿಯಲ್ಲಿ ನಮ್ಮ್ಜ ಬಸ್ಸಿಗೆ ಅಡ್ಡ ಗಟ್ಟಿದ ವಿಚಾರವಾಗಿ ನಾನು ನೋಡಿದ್ದೇನೆ.

ದಿ.02.11.2023 ರಂದು ಬೆ.6.55 ಕ್ಕೆ ಉಡುಪಿಯಿಂದ ಚಿಕ್ಕಮಗಳೂರಿಗೆ KSRTC ಬಸ್ ಸಂ.KA-19-F-3360 ಬಸ್ಸನ್ನು ನಾನು ಚಾಲನೆ ಮಾಡಿಕೊಂಡು ಬೆ.10.50 ರ ಸಮಯಕ್ಕೆ ಚಾರ್ಮುಡಿ ಘಾಟಿಯ ವೀವ್ ಪಾಯಿಂಟ್ ಬಳಿ ಬರುತ್ತಿರುವಾಗ ಆರೋಪಿಯು KA-18-EK-1536 ಡಿಯೋ ವಾಹನದಲ್ಲಿ ಎದುರುನಿಂದ ಮಧ್ಯದ ರಸ್ತೆಯಲ್ಲಿ ಬಂದು ಬಸ್ಸಿಗೆ ಹೊಡೆಯುವುದನ್ನು ತಪ್ಪಿಸಿ ಬಸ್ಸನ್ನು ನಾನು ರಸ್ತೆಯ ಕೆಳಗೆ ಇಳಿಸಿ ಮುಂದೆ ಹೋದೆ. ಆನಂತರ ಆರೋಪಿಯು ಹಿಂಬದಿಯಿಂದ ಹಾರನ್ ಹೊಡೆಯುತ್ತಾ ಬಸ್ಸಿನ ಮುಂದೆ ಬಂದು ಬಸ್ಸನ್ನು ಅಡ್ಡಗಟ್ಟಿ ನಿಲ್ಲಿಸಿ ನನಗೆ ಅವಾಚ್ಯ ಶಬ್ದಗಳಿಂದ ಬೈದರು. ಆಗ ಬಸ್ಸಿನ ಕಂಡಕ್ಟರ್ ಆದ ಚಾಸಾ-1 ರವರು ಬಸ್ಸಿನಿಂದ ಇಳಿದು ಆರೋಪಿಯನ್ನು ಪ್ರಶ್ನಿಸಿದಾಗ ಆರೋಪಿಯು ಎಲ್ಮೇಟ್ ನಿಂದ ಚಾಸಾ-1 ರವರ ತಲೆಗೆ ಹೊಡೆದು ತನ್ನ ಕೈನಿಂದ ಎಡಕೆನ್ನೆಗೆ ಹೊಡೆದರು. ಆರೋಪಿಯು ಚಾಸಾ-1 ರವರ ಶರ್ಟ್ ನ ಬಟನ್ ಹಿಡಿದು ಎಳೆದಾಗ ಬಟನ್ ಕಿತ್ತುಹೋಯಿತು. ಆರೋಪಿಯೊಂದಿಗೆ ಇದ್ದ ಒಬ್ಬ ಮಹಿಳೆಯು ಜಗಳ ಬಿಡಿಸಲು ಬಂದರು ಆರೋಪಿ ಜಗಳ ಮಾಡುತ್ತಿದ್ದರು. ಆಗ ನಮ್ಮ ಬಸ್ ನಲ್ಲಿ ಇದ್ದ ಪ್ಯಾಸೆಂಜರ್ ಗಳು ಜಗಳ ಬಿಡಿಸಿರುತ್ತಾರೆ. ನಂತರ ನಾವು ಮ.12.30 ರ ಸಮಾರಿಗೆ ಬಣಕಲ್ ಪೋಲಿಸ್ ಠಾಣೆಗೆ ಹೋಗಿ ದೂರು ದಾಖಲಿಸಿದೆವು. ನಂತರ ಚಾಸಾ-1 ರವರಿಗೆ ಚಿಕಿತ್ಸೆ ಕೊಡಿಸಲಾಗಿದೆ. ಆರೋಪಿಯು ನಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆ.

ಸಾಕ್ಷಿಯು ಎಂ.ಒ.1 ನ್ನು ನೋಡಿ ಅದು ಗಲಾಟೆ ಸಮಯಕ್ಕೆ ಚಾಸಾ-1 ರವರು ಧರಿಸಿದ್ದ ಶರ್ಟ್ ಮತ್ತು ಎಂ.ಒ.2 ರಂದಲೇ ಆರೋಪಿ ಚಾಸಾ-1 ರವರಿಗೆ ಹೊಡೆದಿದ್ದು ಎಂದು ಗುರುತಿಸುತ್ತಾರೆ.

ಪಾಟೀ ಸವಾಲು: ಆರೋಪಿ ಪರ ಶ್ರೀ ಹೆಚ್.ಎಸ್.ಆರ್. ವಕೀಲರಿಂದಃ

ಆ ದಿನ ನಾನು ಚಾಲನೆ ಮಾಡುತ್ತಿದ್ದ ಬಸ್ ಗೆ ಹಿಂಬದಿಯಲ್ಲಿ ಬಾಗಿಲು ಇತ್ತು. ಬಾಗಿಲ ಪಕ್ಕದಲ್ಲಿ ನಿರ್ವಾಹಕರು ಕೂರುವ ಸ್ಥಳ ಎಂದರೆ ಸರಿ. ಟಿಕೇಟ್ ವಿತರಣೆ ಆದ ನಂತರ ನಿರ್ವಾಹಕರು ಸದರಿ ಸ್ಥಳದಲ್ಲಿ

ಕೂರುತ್ತಾರೆ ಎಂದರೆ ಸರಿ. ಆ ಸ್ಥಳದಲ್ಲಿ ಕೂತರೆ ಬಸ್ಸಿನ ಮುಂಭಾಗದಲ್ಲಿ ಆಗುವ ವಿಷಯ ಗೊತ್ತಾಗುವುದಿಲ್ಲ ಎಂದರೆ ಸರಿ. ಸಾಕ್ಷಿಯು ಸ್ವತಃ ಕೆಲವೊಮ್ಮೆ ಮುಂದೆ ಕೂರುತ್ತಾರೆ ಎಂದು ನುಡಿಯುತ್ತಾರೆ. ನಾನು ಹೇಳಿದ ದಿನಾಂಕದಂದು ಚಾಸಾ-1 ರವರು ಬಸ್ಸಿನ ಮುಂಭಾಗದಲ್ಲಿ ಅಂದಂರೆ ಡ್ರೆವರ್ ಸೀಟ್ ನ ಹಿಂಬದಿ ಸೀಟ್ ನಲ್ಲಿ ಕೂತಿದ್ದರು. ಆ ದಿನ ಸುಮಾರು 20-30 ಜನ ಪ್ಯಾಸೆಂಜರ್ ಗಳು ಬಸ್ಸಿನಲ್ಲಿ ಇದ್ದಿರಬಹುದು. ಸಾಮಾನ್ಯವಾಗಿ ಪ್ರಯಾಣಿಕರು ಬಸ್ಸಿನ ಮುಂಭಾಗದಲ್ಲಿ ಕೂರತ್ತಾರೆ ಎಂದರೆ ಸರಿಯಲ್ಲ. ಪ್ರಕರಣದ ಸಂಬಂಧ ಪೋಲಿಸ್ ಠಾಣೆಗೆ ಎರಡು ಬಾರಿ ಹೋಗಿದ್ದೇನೆ. ದೂರು ಕೊಟ್ಟ ದಿನದಂದೇ ನಾನು ಹೇಳಿಕೆ ಕೊಟ್ಟಿದ್ದೇನೆ. ನನ್ನ ಹೇಳಿಕೆಯನ್ನು ಪೋಲಿಸರು ಪಡೆದಿದ್ದು ಅವರ ಹೆಸರು ನನಗೆ ಗೊತ್ತಿಲ್ಲ. ನನ್ನ ಹೇಳಿಕೆ ದಾಖಲಿಸುವಾಗ ಮ.12.30 ರ ಸಮಯವಾಗಿತ್ತು.

ಚಾರ್ಮುಡಿ ಘಾಟಿ ರಸ್ತೆ ಕಿರಿದಾಗಿದೆ ಎಂದರೆ ಸರಿ. ಆ ರಸ್ತೆಯಲ್ಲಿ ವಾಹನಗಳು ನಿಧನಾಗತಿಯಲ್ಲಿ ಚಾಲಾವಣೆಯಾಗುತ್ತವೆ ಎಂದರೆ ಸರಿ. ನಾನು ಬಸ್ ನ್ನು ಚಾಲನೆ ಮಾಡುವಾಗ ಎದುರು ಬರುವ ವಾಹನಗಳಿಗೆ ಗಮನ ಕೊಡುವುದಿಲ್ಲ ಎಂದರೆ ಸರಿ. ಬೈಕ್ ನಮ್ಮ ಬಸ್ಸಿನ ಎದುರು ಪಾಸ್ ಆದಾಗ ಅದರ ನೋಂದಣಿ ಸಂಖ್ಯೆ ನಾನು ನೋಡಿಲ್ಲ. ಸಾಮಾನ್ಯವಾಗಿ ಅಡ್ಡಬರುವ ವಾಹನಗಳ ನೊಂದಣಿ ಸಂಖ್ಯೆ ನೋಡುವುದಿಲ್ಲ ಎಂದರೆ ಸರಿ. ಚಾರ್ಮುಡಿ ಘಾಟಿ ರಸ್ತೆ ಕಿರಿದಾದ ಕಾರಣ ಚಾಲಕರು ತಮ್ಮ ಲೇನ್ ನಲ್ಲಿ ನಿಧಾನವಾಗಿ ಚಾಲನೆ ಮಾಡುತ್ತಿರುತ್ತಾರೆ ಎಂದರೆ ಸರಿ. ಬೈಕ್ ಚಾಲಕ ನಮ್ಮ ಬಸ್ಸಿನ ಎದುರು ಬಂದಾಗ ನಾವು ಅವರಿಗೆ ಏನನ್ನು ಹೇಳಿಲ್ಲ. ಆ ರಸ್ತೆಯಲ್ಲಿ ನಾನು ವೇಗವಾಗಿ ಬಸ್ ಚಾಲನೆ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಚಾರ್ಮುಡಿ ಘಾಟಿಯ 11 ನೇ ತಿರುವಿನಿಂದ ಕೊಟ್ಟಿಗೆಹಾರದ ತಿರುವಿನವರೆಗೂ ಸಮವಾದ ರಸ್ತೆ ಇದೆ ಎಂದರೆ ಸರಿಯಲ್ಲ. ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ಕೂಟಿ ಅಡ್ಡ ಬಂದ ಸ್ಥಳದಿಂದ ಸುಮಾರು ಅರ್ಧ ಕಿ.ಮೀನಷ್ಟು ದೂರ ಹೋಗಿದ್ದೆವು. ಆಗ ಸಮಯ ಬೆ.10.50 ಅಗಿತ್ತು. ಆ ಸಮಯಕ್ಕೆ ಸ್ಕೂಟಿ ಪಾಸ್ ಆಗಿ 2-3 ನಿಮಿಷ ಆಗಿರಬಹುದು.

ಘಾಟಿ ರಸ್ತೆಯಲ್ಲಿ ಅರ್ಧ ಕಿ.ಮೀ. ಸಂಚರಿಸಲು 15 ನಿಮಿಷಗಳ ಅವಧಿ ಬೇಕು ಎಂದರೆ ಸರಿಯಲ್ಲ. ಆ ದಿನ ಬೆಳಗ್ಗಿನ ಉಪಹಾರಕ್ಕೆಂದು ಮೂಡುಬಿದರೆ ಬಳಿ ವಾಹನ ನಿಲ್ಲಿಸಿದ್ದೆವು. ಅಲ್ಲಿ ಸುಮಾರು 10 ನಿಮಿಷಗಳ ಕಾಲ ಇದ್ದೆವು. ಸ್ಥಳದಲ್ಲಿ ಸುಮಾರು 3-4 ನಿಮಿಷ ಜಗಳವಾಗಿರಬಹುದು. ಜಗಳವನ್ನು ಬಿಡಿಸಿದವರ ಹೆಸರು ಈಗ ಹೇಳಲು ಆಗುವುದಿಲ್ಲ. ಆರೋಪಿಯೊಂದಿಗೆ ಇದ್ದರು ಎಂದು ಹೇಳಲಾದ ಮಹಿಳೆಯ ಹೆಸರು ಹೇಳಲು ಆಗುವುದಿಲ್ಲ. ಆ ಸಮಯಕ್ಕೆ ಆರೋಪಿಯ ಹೆಸರನ್ನು ಸಹಾ ತಿಳಿದುಕೊಂಡಿಲ್ಲ. ನಾನು ಹೇಳಿದಂತೆ ಆರೊಪಿ ಯಾವುದೇ ಕೃತ್ಯ ಮಾಡಿಲ್ಲದೇ ಇದ್ದರೂ ಅನವಶ್ಯಕವಾಗಿ ಅವರ ವಾಹನದ ನೋ.ಸಂ.ಯನ್ನು ಕೊಟ್ಟು ತೊಂದರೆ ನೀಡುತ್ತಿದ್ದೇವೆ ಎಂದರೆ ಸರಿಯಲ್ಲ. ಈ ಕಾರಣ ದೂರಿನಲ್ಲಿ ಆರೋಪಿಯ ಹೆಸರು ನಮೂದಿಸಿಲ್ಲ ಎಂದರೆ ಸರಿಯಲ್ಲ. ಗಲಾಟೆ ಮುಗಿಯಲು 5-10 ನಿಮಿಷಗಳಾಯಿತು. ಆನಂತರ ಬೆ.11.05 ರ ಸಮಯಕ್ಕೆ ಸ್ಥಳದಿಂದ ಹೊರಟೆವು. ಆ ಸ್ಥಳದಿಂದ ಬಣಕಲ್ ಪೋಲಿಸ್ ಠಾಣೆಗೆ ಸುಮಾರು 10-15 ಕಿ.ಮೀ ಅಂತರ ಇರಬಹುದು. ಅಷ್ಟು ಕಿ.ಮೀ ಸಂಚರಿಸಲು ಸುಮಾರು 10.15 ನಿಮಿಷಗಳ ಕಾಲ ಬೇಕು. ಪೋಲಸ್ ಠಾಣೆಗೆ ಹೋಗಿದ್ದಾಗ ಮ.12.30 ರ

ಸಮಯವಾಗಿತ್ತು.

ದೂರನ್ನು ಚಾಸಾ-1 ರವರು ಕೈ ಬರವಣಿಗೆಯಲ್ಲಿ ಕೊಟ್ಟಿದ್ದನ್ನು ಪೋಲಿಸರು ಪಡೆದಿದ್ದಾರೆ. ಕೈಬರವಣಿಗೆ ದೂರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆಯಾ ಎಂದು ನನಗೆ ಗೊತ್ತಿಲ್ಲ. ಆ ದಿನ ಸಂಜೆಯವರೆಗೂ ಠಾಣೆಯಲ್ಲಿಯೇ ಇದ್ದೆವು. ದೂರನ್ನು ಸ್ವೀಕರಿಸಿದ ಪೋಲಿಸರ ಹೆಸರು ನನಗೆ ಗೊತ್ತಿಲ್ಲ. ಪ್ರಕರಣದ ಸಂಬಂಧ ನಾನು ಠಾಣೆಗೆ ಹೋಗಿಲ್ಲದ ಕಾರಣ ದೂರನ್ನು ಯಾರು ಸ್ವೀಕರಿಸಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಆ ದಿನ ಆಸ್ಪತ್ರೆಗೆ ಹೋಗಿದ್ದಾಗ ಸುಮಾರು ಮ.12.45 ರಿಂದ 1.00 ಗಂಟೆಯಾಗಿರಬಹುದು. ಚಾಸಾ-1 ರವರಿಗೆ ಚಿಕಿತ್ಸೆ ಕೊಟ್ಟ ವೈದ್ಯರ ಹೆಸರು ನನಗೆ ಗೊತ್ತಿಲ್ಲ. ಆ ದಿನ ಆಸ್ಪತ್ರೆಗೆ ಹೋಗಿರದ ಕಾರಣ ವೈದ್ಯರ ಹೆಸರು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ವೀವ್ ಪಾಯಿಂಟ್ ಕೊಟ್ಟಿಗೆಹಾರ ಗ್ರಾಮಕ್ಕೆ ಸೇರಿದ್ದು. ಚಾರ್ಮುಡಿ ಘಾಟಿಯಲ್ಲಿ ಎರಡು ವೀವ್ ಪಾಯಿಂಟ್ ಗಳು ಇವೆ. ವೀವ್ ಪಾಯಿಂಟ್ ಗಳ ಸ್ಥಳ ಮತ್ತು ಹೆಸರು ಹೇಳಲು ಆಗುವುದಿಲ್ಲ. ಘಾಟಿಯ ಕಡೆಗೆ ಇರುವ ವೀವ್ ಪಾಯಿಂಟ್ ಬಳಿ ಘಟನೆಯಾಗಿದೆ.

ನಾನು ಹೇಳಿದ ಸಮಯಕ್ಕೆ ಆರೋಪಿಯು ಸ್ಕೂಟಿಯಲ್ಲಿ ಅಡ್ಡ ಬಂದರು ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಆರೋಪಿಯು ನಮ್ಮ ಬಸ್ ನ್ನು ಅಡ್ಡಗಟ್ಟಿ ಬೈದು ಹಲ್ಲೆ ಮಾಡಿದ್ದಾರೆ ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಆರೋಪಿಯು ಚಾಸಾ-1 ರವರಿಗೆ ಹೊಡೆದು ಅವರ ಬಟ್ಟೆಯನ್ನು ಹಿಡಿದು ಎಳೆದಾಗಿ ಹರಿದುಹಾಕಿದ್ದಾರೆ ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಗಲಾಟೆ ಬಿಡಿಸಿ ಬಣಕಲ್ ಪೊಲೀಸ್ ಠಾಣೆಗೆ ಹೋಗಿ ದೂರು ಕೊಟ್ಟಿದ್ದೇವೆ ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನಾನು ಹೇಳಿದಂತೆ ಪೋಲಿಸ್ ಠಾಣೆಗೆ ಹೋಗಿಲ್ಲ ಹಾಗೂ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಆ ದಿನ ಆರೋಪಿಯನ್ನು ನೋಡಿಲ್ಲ ಎಂದರೆ ಸರಿಯಲ್ಲ. ಆರೆ ೋಪಿ ನನಗೂ ಮತ್ತು ಚಾಸಾ-1 ರವರಿಗೆ ಬೈದು ಹಲ್ಲೆ ಮಾಡಿದ್ದಾರೆ ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಪ್ರಕರಣಕ್ಕೂ, ಆರೋಪಿಗೂ, ಮುದ್ದೆಮಾಲುಗಳಿಗೂ ಒಂದಕ್ಕೊಂದು ಸಂಬಂದ ಇಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರೂ ಸಹಾ ಚಾಸಾ-1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

C/c ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.